ದಿನಾಂಕ 05-10-2023 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 1 ನೇ ಪ್ರತಿವಾದಿ ಪರ ಶ್ರೀ ಎಸ್ ಆರ್ ಎಚ್ ವಕೀಲರಿಂದ .

ಇದೇ ದಾವಾ ಆಸ್ತಿ ಬಾಬತ್ತು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 125/2013 ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನನ್ನು ಸಹ ಪಕ್ಷಗಾರರನ್ನಾಗಿ ಪರಿಗಣಿಸಿ ಎಂದು ಅರ್ಜಿ ಹಾಕಿ ನಾನು 2 ನೇ ಪ್ರತಿವಾದಿ ಆಗಿದ್ದೆ ಎಂದರೆ ಸರಿ. ಆ ದಾವೆಯಲ್ಲಿ ನನ್ನ ಸಾಕ್ಷ್ಯ ಜವಾಬು ಆಗಿದೆ ಎಂದರೆ ಸರಿ. ಆ ದಾವೆಯಲ್ಲಿ ದಾವಾ ಆಸ್ತಿಯ ಕಬ್ಜಾ ಕೊಡಿಸಬೇಕೆಂದು ನಾನು ಕೌಂಟರ ಮಾಗಣಿ ಕೇಳಿಲ್ಲ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ನನಗೆ ಮಳಿಗೆ ನಂಬರ 1 ಅನ್ನು ನೀಡಬೇಕೆಂದು ಕೌಂಟರ್ ಮಾಗಣಿ ಕೇಳಿದ್ದೆ. ಈ ದಾವೆಯ 1 ನೇ ಪ್ರತಿವಾದಿ ಅಸಲು ದಾವಾ ಸಂಖ್ಯೆ 125/2013 ಅನ್ನು ಸಲ್ಲಿಸಿದ್ದ ಎಂದರೆ ಸರಿ. ಆ ದಾವೆಯ ಮತ್ತು ಈ ದಾವೆಯಲ್ಲಿಯ ದಾವಾ ಆಸ್ತಿಯು ಈ ದಾವೆಯ 2 ನೇ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯು ನನಗೆ ಯಾವತ್ತೂ ಸಹ ಸ್ವಾಧೀನ ನೀಡಿಲ್ಲ ಎಂದರೆ ಸರಿ. ಬಹಿರಂಗ ಹರಾಜಿನಲ್ಲಿ ದಾವಾ ಆಸ್ತಿಯನ್ನು ತೆಗೆದುಕೊಂಡಿರುವುದರಿಂದ ಆ ಆಧಾರದ ಮೇಲೆ ದಾವಾ ಆಸ್ತಿಯ ಸ್ವಾಧೀನ ಕೇಳುತ್ತಿದ್ದೇನೆ. ಬಹಿರಂಗ ಹರಾಜು ದಿನದಿಂದ ಇಂದಿನವರೆಗೆ ಸದರಿ ಮಳಿಗೆಯ ಬಾಡಿಗೆ ಕಟ್ಟುತ್ತಿದ್ದೀರಾ ಎಂದರೆ ಸಾಕ್ಷಿ ತನಗೆ ಮಳಿಗೆ ನೀಡಿಲ್ಲ ಹಾಗಾಗಿ ಬಾಡಿಗೆ ಕಟ್ಟುತ್ತಿಲ್ಲ ಎನ್ನುತ್ತಾರೆ.

ಅಸಲು ದಾವಾ ಸಂಖ್ಯೆ 125/2013 ರಲ್ಲಿ ನಾನು ಹರಾಜು ಪ್ರಕ್ರಿಯೆ ಕಾನೂನುಬಾಹಿರ ಆಗಿದೆ ಎಂದು ಪ್ರಶ್ನೆ ಮಾಡಿದ್ದೆ ಹಾಗೂ ಅಸಲು ದಾವಾ ಸಂಖ್ಯೆ 125/2013 ರಲ್ಲಿ ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿ ಎಫ್ ಆರ್ ನಂಬರ 9/2023 ಸಲ್ಲಿಸಿದ್ದೇನೆ ಎನ್ನುವುದು ಗೊತ್ತಿಲ್ಲ. ಮೇಲ್ಮನವಿ ಸಲ್ಲಿಸಲು ನನ್ನ ವಕೀಲರ ಮೂಲಕ ನಾನು ಮೇಲ್ಮನವಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. 2 ನೇ ಪ್ರತಿವಾದಿ ದಾವಾ ಆಸ್ತಿಯ ಮಳಿಗೆಯನ್ನು ನನ್ನ ಸ್ವಾಧೀನಕ್ಕೆ ನೀಡಿದ್ದರು ಹಾಗೂ ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ದಿನಾಂಕ 25-11-2013 ರಂದು 2 ನೇ ಪ್ರತಿವಾದಿಯು ದಾವಾ ಆಸ್ತಿಯ ಮಳಿಗೆಯ ಬೀಗವನ್ನು ನನಗೆ ನೀಡಿದ್ದರು. ನಾನು ಮಳಿಗೆ ಒಳಗೆ ಹೋಗುವಷ್ಟರಲ್ಲಿ 1 ನೇ ಪ್ರತಿವಾದಿಯು ಬೀಗ ಒಡೆದು ಮಳಿಗೆಯ ಒಳಗೆ ಹೋದನು. ನಿಪಿ 4 ರಂತೆ ನಾನು ದಿನಾಂಕ 25-11-2013 ರಂದು 2 ನೇ ಪ್ರತಿವಾದಿಗೆ ದಾವಾ ಆಸ್ತಿಯ ಸ್ವಾಧೀನ ಕೊಡಬೇಕೆಂದು ಮನವಿ ನೀಡಿದ್ದೆ ಎಂದರೆ ಸರಿ. ನಿಪಿ 4 ರಲ್ಲಿ 1 ನೇ ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನವನ್ನು ಕಾನೂನು ಬಾಹಿರವಾಗಿ ತೆಗದುಕೊಂಡಿರುತ್ತಾನೆ ಎಂದು ಹೇಳಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ದಾವಾ ಆಸ್ತಿಯನ್ನು ನನಗೆ ನೀಡಿದ ನಂತರ 1 ನೇ ಪ್ರತಿವಾದಿಯು ದಾವಾ ಆಸ್ತಿಯ

ಮಳಿಗೆಯನ್ನು ಬಲಾತ್ಕಾರವಾಗಿ ತೆಗೆದುಕೊಂಡನು ಎನ್ನುವ ವಿಚಾರಕ್ಕೆ ಸಂಬಂಧಿಸಿ ಪೊಲೀಸ ದೂರನ್ನು ನೀಡಿದ್ದೇನೋ ಇಲ್ಲವೋ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 125/2013 ರಲ್ಲಿ 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಬಲಾತ್ಕಾರವಾಗಿ ಕಬ್ಜಾ ಪಡೆದುಕೊಂಡನು ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಅಸಲು ದಾವಾ ಸಂಖ್ಯೆ 125/2013 ರಲ್ಲಿ ತನ್ನ ಸಾಕ್ಷ್ಯದ ದೃಢಿಕೃತ ನಕಲನ್ನು ತೋರಿಸಿ ಅದು ನಿಮ್ಮ ಸಾಕ್ಷ್ಯ ಮತ್ತು ಅದರಲ್ಲಿರುವ ಸಹಿ ನಿಮ್ಮ ಸಹಿ ಆಗಿರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅನ್ನು ನಿಡಿ 1 ಎಂದು ಗುರುತಿಸಲಾಯಿತು.

(**ನ್ಯಾಯಾಲಯದ ಟಿಪ್ಪಣಿ:** ನಿಡಿ 1 ರಲ್ಲಿಯ ಅಂಶಗಳ ಬಗ್ಗೆ ಈ ದಾಖಲೆ ಗುರುತು ಆಗಿರುವುದಿಲ್ಲ. ಕೇವಲ ಸಾಕ್ಷಿಯು ದಾಖಲೆಯನ್ನು ಹಾಗೂ ಅದರಲ್ಲಿರುವ ಸಹಿಯನ್ನು ಒಪ್ಪಿಕೊಂಡ ಬಗ್ಗೆ ಮಾತ್ರ ನಿಶಾನೆಯನ್ನಾಗಿ ಗುರುತು ಮಾಡಲಾಗಿರುತ್ತದೆ.)

ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸದರಿ ದಾಖಲೆ ಅಸಲು ದಾವಾ ಸಂಖ್ಯೆ 125/2013 ರ ತೀರ್ಪು ಮತ್ತು ಡಿಕ್ರಿಯ ದೃಢಿಕೃತ ನಕಲು ಎಂದು ಸೂಚಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ತನಗೆ ಗೊತ್ತಾಗುತ್ತಿಲ್ಲ ಎನ್ನುತ್ತಾರೆ.

ಈ ದಾವೆಯಲ್ಲಿ ದಾವಾ ಆಸ್ತಿಯನ್ನು ಯಾರಿಂದ ಕಬ್ಜಾ ಕೊಡಿಸಬೇಕೆಂದು ನಾನು ಕೇಳಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯಿಂದ ರೂ. 2,90,000/- ಹಣ ಪರಿಹಾರವಾಗಿ ಕೊಡಿಸಬೇಕೆಂದು ಕೇಳಿಕೊಂಡಿದ್ದೆ ಎಂದರೆ ಸರಿ. ಆ ಕುರಿತು ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಯಾವುದೇ ಒಪ್ಪಂದ ಆಗಿಲ್ಲ ಎಂದರೆ ಸರಿ. ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ದಾವಾ ಆಸ್ತಿಯ ಮಾಲಿಕತ್ವದ ಬಗ್ಗೆ ಅಥವಾ 1 ನೇ ವಾದಿಯ ವ್ಯವಹಾರದ ಬಗ್ಗೆ ಅಥವಾ ಸ್ವಾಧೀನದ ಬಗ್ಗೆ ಯಾವುದೇ ಒಪ್ಪಂದಗಳು ಆಗಿಲ್ಲ ಎಂದರೆ ಸರಿ. ಇವತ್ತಿಗೂ ಸಹ 1 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಚಹಾ ಅಂಗಡಿ ನಡೆಸುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಾನೂನು ಬಾಹಿರವಾಗಿ ನಡೆಸುತ್ತಿದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಯ ಸ್ವಾಧೀನವನ್ನು 1 ನೇ ಪ್ರತಿವಾದಿಗೆ ನಾನು ನೀಡಿಲ್ಲ ಎಂದರೆ ಸರಿ. ಅದೇ ರೀತಿ 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಿರುದ್ಧ ಕಾನೂನು ಬಾಹಿರವಾಗಿ ಸ್ವಾಧೀನ ಇರುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಿರುದ್ಧ ಆ ಕುರಿತು ಪೊಲೀಸ ದೂರು ನೀಡಿದ್ದಾರೆ ಎನ್ನುತ್ತಾರೆ. ಸದರಿ ಪೊಲೀಸ ದೂರಿನ ಪ್ರತಿ ನಾನು ಹಾಜರುಪಡಿಸಿದ್ದೇನೋ ಇಲ್ಲವೋ ಗೊತ್ತಿಲ್ಲ.

ಮೀನು ಮಾರುಕಟ್ಟೆ ವಾಣಿಜ್ಯ ಸಂಕೀರ್ಣದ ಹೊರಗಿನ ಭಾಗದಲ್ಲಿ 4 ಅಂಗಡಿಗಳು ಹಾಗೂ ಒಳಗಿನ ಭಾಗದಲ್ಲಿ ಬೇರೆ ಮಳಿಗೆಗಳು ಇದ್ದು, ಒಳಗಿನ ಮಳಿಗೆಗಳ ಪೈಕಿ 1 ಮಳಿಗೆಯನ್ನು ಬಾಡಿಗೆಗೆ ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪ್ರಾಂಗಣದ ಒಳಗಿನ ಬದಿಯಲ್ಲಿ ತನಗೆ ಸೇರಿದ ಯಾವುದೇ ಮಳಿಗೆ ಇರುವುದಿಲ್ಲ ಎನ್ನುತ್ತಾರೆ. ಸದರಿ ಮೀನು ಮಾರುಕಟ್ಟೆ ಒಳ ಪ್ರಾಂಗಣದಲ್ಲಿ ಮೀನು ವ್ಯಾಪಾರಸ್ಥರಿಗೆ ಪ್ರತ್ಯೇಕ ಮಳಿಗೆಗಳನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಆ ರೀತಿ ಎಷ್ಟು ಮಳಿಗೆಗಳು ಇವೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಕೃಷಿಕ. ಇವತ್ತಿಗೂ ಸಹ ನಾನು ಸದರಿ ಮೀನು ಮಾರುಕಟ್ಟೆ ಒಳ ಪ್ರಾಂಗಣದಲ್ಲಿ ಮೀನು ಮಾರಾಟ ಮಾಡುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ರಸಗೊಬ್ಬರ ಅಂಗಡಿಯನ್ನು ತೆರೆಯಲು ಹಾರಾಜಿನಲ್ಲಿ ಪಡೆದಿದ್ದೆ. ಹರಾಜಿಗೆ ಪಡೆಯುವ ಮುಂಚೆ ರಸಗೊಬ್ಬರ ಅಂಗಡಿಗಾಗಿ ಅಗಂಡಿ ಬೇಕೆಂದು ಕೇಳಿರುವುದಿಲ್ಲ. ದಾವಾ ಆಸ್ತಿಯು ಹಳಿಯಾಳ-ದಾಂಡೇಲಿ ಮುಖ್ಯ ರಸ್ತೆಯ ಬದಿಯಲ್ಲಿ ಇದೆ ಎಂದರೆ ಸರಿ. ನಾಲ್ಕು ಮಳಿಗೆಗಳ ಪೈಕಿ ಮೂರು ಮಳಿಗೆಗಳು ಹಳಿಯಾಳ-ದಾಂಡೇಲಿ ಮುಖ್ಯ ರಸ್ತೆಯ ಕಡೆ ಮುಖ ಮಾಡಿದ್ದು, ಒಂದು ಮಳಿಗೆ ಸದರಿ ಮಳಿಗೆಗಳ ಬದಿಯಲ್ಲಿ ಬರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನವನ್ನು ನನಗೆ ಕೊಡದೇ ಇರುವುದರಿಂದ 1 ನೇ ಪ್ರತಿವಾದಿಯು ನನಗೆ ಯಾವುದೇ ರೀತಿಯ ಪರಿಹಾರ ನೀಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ನನಗೆ ಅಂಗಡಿಯ ಸ್ವಾಧೀನ ಕೊಡದೇ ಇರುವುದರಿಂದ ನಾನು ಅವರಿಗೆ ಯಾವುದೇ ರೀತಿಯ ಬಾಡಿಗೆ ನೀಡಿರುವುದಿಲ್ಲ ಎಂದರೆ ಸರಿ.

ನನಗೆ 2 ಎಕರೆ ಜಮೀನು ಹುಲ್ಲಟ್ಟಿ ಗ್ರಾಮದಲ್ಲಿ ಇದೆ. ಅಲ್ಲಿ ಕಬ್ಬು ಬೆಳೆಯುತ್ತೇನೆ. ಕಬ್ಬು ವರ್ಷ ಪೂರ್ತಿ ಕೆಲಸ ಮಾಡುವ ಬೆಳೆ ಅಲ್ಲ ಎಂದರೆ ಸರಿ. ನಾನು ಕೃಷಿಕ ಹಾಗೂ ಕಬ್ಬು ಬೆಳೆಯುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಹರಾಜಿನಲ್ಲಿ ನನಗೆ ದಾವಾ ಆಸ್ತಿ ದೊರಕಿರುವುದರಿಂದ ಅದರ ಸ್ವಾಧೀನ ಕೊಡಬೇಕೆಂದು 2 ನೇ ಪ್ರತಿವಾದಿಗೆ ಕೇಳಿರುತ್ತೇನೆ. ಅವರು ನನಗೆ ಸ್ವಾಧೀನ ನೀಡಿರುವುದಿಲ್ಲ. ಕಬ್ಜಾ ಕೊಡದೇ ಇರುವ ಬಗ್ಗೆ 2 ನೇ ಪ್ರತಿವಾದಿಯ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಿ ಎಂದರೆ ಸಾಕ್ಷಿ ಈ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಈ ದಾವೆಯಲ್ಲಿ 2 ನೇ ಪ್ರತಿವಾದಿಯಿಂದ ದಾವಾ ಆಸ್ತಿಯ ಸ್ವಾಧೀನ ಕೊಡಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಸದರಿ ನಾಲ್ಕು ಮಳಿಗೆಗಳಿಗೆ ಅನುಕ್ರಮ ಸಂಖ್ಯೆಗಳನ್ನು ನೀಡಿದ್ದರ ಕುರಿತು ಆಗಿರುವ ಠರಾವನ್ನು ನಾನು ಹಾಜರುಪಡಿಸಿಲ್ಲ. ಸದರಿ ಮಳಿಗೆಗಳಿಗೆ ಅನುಕ್ರಮ ಸಂಖ್ಯೆಗಳನ್ನು ನೀಡಿದ್ದರ ಕುರಿತು ದಿನಪತ್ರಿಕೆಯಲ್ಲಿ ಹೊರಡಿಸಿದ ಪ್ರಕಟಣೆಯ ಮೂಲಕ ತಿಳಿದುಕೊಂಡಿರುತ್ತೇನೆ. ಸದರಿ ದಿನಪತ್ರಿಕೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಿನಪತ್ರಿಕೆಯ ಪ್ರಕಟಣೆಯಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ಹಾಗೂ ಸದರಿ ಮಳಿಗೆ ಯಾವ ದಿಕ್ಕಿಗೆ ಮುಖ ಮಾಡಿದ ಎಂಬುದರ ಬಗ್ಗೆ ವಿವರಣೆ ಇತ್ತು. ಬಹಿರಂಗ ಹರಾಜಿನಲ್ಲಿ ಸುಮಾರು 15-16 ಜನರು ಭಾಗವಹಿಸಿದ್ದರು. ಯಾವ ಬಿಡ್ ದಾರರು ಎಷ್ಟು ಮೊತ್ತಕ್ಕೆ ಮಳಿಗೆಗಳನ್ನು ಕೇಳಿದ್ದರು ಎನ್ನುವ

ಬಗ್ಗೆ 2 ನೇ ಪ್ರತಿವಾದಿಯಿಂದ ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ. ದಾವಾ ಆಸ್ತಿಯ ಕಟ್ಟಡ ನಿರ್ಮಾಣಕ್ಕಿಂತ ಮುಂಚೆ ಅದೇ ಜಾಗದಲ್ಲಿ 1 ನೇ ಪ್ರತಿವಾದಿ ಚಹಾ ಅಂಗಡಿ ನಡೆಸುತ್ತಿದ್ದನು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಈ ಮೊದಲು ದಾವಾ ಆಸ್ತಿಯ ಜಾಗದಲ್ಲಿ 1 ನೇ ಪ್ರತಿವಾದಿಯ ಡಬ್ಬಾ ಅಂಗಡಿ ಇತ್ತು ಎನ್ನುವುದು ಗೊತ್ತಿಲ್ಲ. 1 ನೇ ಪ್ರತಿವಾದಿಯಿಂದ 2 ನೇ ಪ್ರತಿವಾದಿ ಪ್ರತಿವಾರ ತೆರಿಗೆ ಸಂಗ್ರಹ ಮಾಡುತ್ತಿದ್ದರು ಎನ್ನುವ ಬಗ್ಗೆ ಗೊತ್ತಿಲ್ಲ. ಆ ಕಾರಣಕ್ಕಾಗಿ ಮೊದಲಿದ್ದ ಅಂಗಡಿಗಾರರಿಗೆ ಪ್ರಥಮ ಪ್ರಾಶಸ್ತ್ಯ ನೀಡಿ ಉಳಿದವರಿಗೆ ಹರಾಜಿನಲ್ಲಿ ಮಳಿಗೆಗಳನ್ನು ಕೊಡಬೇಕೆಂದು ಠರಾವನ್ನು 2 ನೇ ಪ್ರತಿವಾದಿ ಮಾಡಿದ್ದರು ಎನ್ನುವುದು ಗೊತ್ತಿಲ್ಲ.

ದಾವಾ ಆಸ್ತಿ ಹಾಗೂ ಇತರ ಮಳಿಗೆಗಳನ್ನು ಹರಾಜು ಹಾಕುವ ವಿಚಾರವಾಗಿ 2 ನೇ ಪ್ರತಿವಾದಿಯ ಕಚೇರಿಯ ಸಿಬ್ಬಂದಿಗಳು ಹಗರಣದಲ್ಲಿ ಮುಳುಗಿದರು ಎನ್ನುವ ಬಗ್ಗೆ ಪ್ರತಿಕೆಗಳಲ್ಲಿ ವರದಿ ಆಗಿತ್ತು ಎನ್ನುವುದು ಗೊತ್ತಿಲ್ಲ.

ಸಾಕ್ಷಿಗೆ ದಿನಾಂಕ 28-11-2013 ರ 2 ನೇ ಪ್ರತಿವಾದಿಯ ಸಭಾ ನಡುವಳಿಕೆಯ ದಾಖಲೆ ತೋರಿಸಿ ಸದರಿ ದಾಖಲೆಯಲ್ಲಿ ನಿಮ್ಮ ಸಹಿಯು ಸಹ ಇರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದು ಸದರಿ ದಾಖಲೆಯು ಒಟ್ಟು 4 ಹಾಳೆಗಳನ್ನು ಹೊಂದಿದ್ದು, ಅದನ್ನು ಒಟ್ಟಾರೆಯಾಗಿ ನಿಡಿ 2 ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿಯ ಸಾಕ್ಷಿಯ ಸಹಿಯನ್ನು ನಿಡಿ 2 ಎ ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿ ಆಗಿರುವ ಠರಾವನ್ನು ಜಾರಿಗೊಳಿಸಿರುವ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ನನ್ನ ನಡುವೆ ಯಾವುದೇ ಒಪ್ಪಂದ ಆಗದೇ ಇರುವುದರಿಂದ ಆತನಿಂದ ದಾವಾ ಆಸ್ತಿಯ ಸ್ವಾಧೀನ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅವರಿಂದ ಪರಿಹಾರ ಪಡೆಯಲು ಸಹ ಹಕ್ಕನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮಾಸಿಕ ರೂ.10,000/- ಆದಾಯ ಬರುತ್ತಿತ್ತು ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ 2 ನೇ ಪ್ರತಿವಾದಿಯ ಜೊತೆ ಮಿಲಾಪಿಯಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ಕಾರಣದಿಂದ 1 ನೇ ಪ್ರತಿವಾದಿಗೆ ತಗುಲಿರುವ ಖರ್ಚು ವೆಚ್ಚಗಳನ್ನು ನಾನೇ ಭರಿಸಬೇಕಾಗುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ಮತ್ತು 3 ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದು ಮೂಂದೂಡಲಾಯಿತು.

O.S.20/2016 Cross of PW 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.